ಉ) ಗುತ್ತಿಗೆದಾರರು ಸಮಯಕ್ಕೆ ಸರಿಯಾಗಿ ಕೆಲಸ ಪೂರೈಸದಿದ್ದರೆ, ಕಳಪೆ ಕಾಮಗಾರಿ ಕೈಗೊಂಡರೆ ಅಂತವರ ವಿರುದ್ಧ ಸರ್ಕಾರವು ನಿಯಮಾನುಸಾರ ಕ್ರಮ ಕೈಗೊಳ್ಳುವುದು.

**ಕಾರಂಜಾ ಹಾಗೂ ಚುಳಕಿನಾಲಾ ಕಾಮಗಾರಿಯನ್ನು ಪೂರ್ಣಗೊಳಿಸುವುದು**

**4118(4340); ಶ್ರೀ ಈಶ್ವರ್ ಭಿಮಣ್ಣ ಖಂಡ್ರೆ (ಭಾಲ್ಕಿ**

ಅ) 2013–14 ನೇ ಆರ್ಥಿಕ ವರ್ಷದಲ್ಲಿ ರಾಜ್ಯದಲ್ಲಿ ನೀರಾವರಿ ಯೋಜನೆಗೆ ಎಷ್ಟು ಅನುದಾನವನ್ನು ಮೀಸಲಿಡಲಾಗಿತ್ತು (ಯೋಜನೆ ಮತ್ತು ಯೋಜನೆತರ ವಿವರ ನೀಡುವುದು);

ಆ) ಮಾರ್ಚ್ 2014ರವರೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; ಎಷ್ಟನ್ನು ವೆಚ್ಚ ಮಾಡಲಾಗಿದೆ; ಹೊಸ ನೀರಾವರಿ ಯೋಜನೆಗಳು ಹಾಗೂ ಅಪೂರ್ಣಗೊಂಡ ಯೋಜನೆಗಳಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ (ಸಂಪೂರ್ಣ ವಿವರ ನೀಡುವುದು);

ಇ) ಬೀದರ್ ಜಿಲ್ಲೆಯ ಕಾರಂಜಾ ಮತ್ತು ಚುಳುಕಿನಾಲಾ ಎರಡೂ ಅಪೂರ್ಣ ನೀರಾವರಿ ಯೋಜನೆಗಳನ್ನು ಒಂದು ವರ್ಷದಲ್ಲಿ ಪೂರ್ಣಗೊಳಿಸುವುದಾಗಿ ಸರ್ಕಾರ ಭರವಸೆ ನೀಡಿರುವುದು ನಿಜವಲ್ಲವೇ;

ಈ) ಹಾಗಿದ್ದಲ್ಲಿ, 2013–14 ನೇ ಸಾಲಿನಲ್ಲಿ ಈ ಯೋಜನೆಗಳ ಅನುದಾನವನ್ನು ಬಿಡುಗಡೆ ಮಾಡದೇ ಇರುವುದು ನಿಜವಲ್ಲವೇ;

ಉ) ಬೀದರ್ ಜಿಲ್ಲೆಯಲ್ಲಿನ ಅಪೂರ್ಣಗೊಂಡ ಯೋಜನೆಗಳನ್ನು ಈ ಸಾಲಿನಲ್ಲಾದರೂ ಪೂರ್ಣಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಂ.ಬಿ. ಪಾಟೀಲ್ (ಜಲ ಸಂಪನ್ಮೂಲ ಸಚಿವರು (ಭಾರಿ ಮತ್ತು ಮಧ್ಯಮ ನೀರಾವರಿ)

ಅ) 2013–14 ನೇ ಸಾಲಿನಲ್ಲಿ ಜಲ ಸಂಪನ್ಮೂಲ ಇಲಾಖೆಗೆ ನೀಡಿರುವ ಅನುದಾನದ ವಿವರ ಕೆಳಗಿನಂತಿವೆ.

| ಕ್ರ.ಸಂ. | ಲೆಕ್ಕ ಶೀರ್ಷಿಕೆ | ನೀಡಿರುವ ಅನುದಾನ (₹ ಕೋಟಿಗಳಲ್ಲಿ) |
|---|---|---|
| 1 | ಯೋಜನೆ | 7669.19 |
| 2 | ಯೋಜನೇತರ | 733.77 |
| ಒಟ್ಟು | | **8402.96** |

ಆ) 2013–14 ನೇ ಸಾಲಿನಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ ₹ 6730.26 ಕೋಟಿಗಳ ಅನುದಾನ ಬಿಡುಗಡೆ/ವೆಚ್ಚ ಮಾಡಲಾಗಿದೆ.

ಇ) ಕಾರಂಜಾ ಯೋಜನೆಯನ್ನು ಪ್ರಸಕ್ತ 2014–15ನೇ ಸಾಲಿನಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ. ಹಾಗೂ ಸದರಿ ಯೋಜನೆಗೆ ₹ 75.00 ಕೋಟಿಗಳ ಅನುದಾನ ಒದಗಿಸಲಾಗಿದೆ.

ಚುಳುಕಿನಾಲಾ ಯೋಜನೆಯು ಪೂರ್ಣಗೊಂಡಿದ್ದು, ಕಾಲುವೆಗಳ ನಿರ್ವಹಣೆ/ದುರಸ್ತಿ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಸದರಿ ಯೋಜನೆ ನಿರ್ವಹಣೆಗೆ ₹ 4.09 ಕೋಟಿ ಅನುದಾನ ಒದಗಿಸಲಾಗಿದೆ.

ಈ) ಕಾರಂಜಾ ಯೋಜನೆಯ ಅನುಷ್ಠಾನ/ನಿರ್ವಹಣೆ ಚರುಕುಗೊಳಿಸುವ ನಿಟ್ಟಿನಲ್ಲಿ 2013–14 ನೇ ಸಾಲಿನಲ್ಲಿ ಕರ್ನಾಟಕ ನೀರಾವರಿ ನಿಗಮಕ್ಕೆ ಹಸ್ತಾಂತರಿಸಿದ್ದು, ಪ್ರಸಕ್ತ 2014–15ನೇ ಸಾಲಿನಲ್ಲಿ ಸದರಿ ಯೋಜನೆಗೆ ₹ 75.00 ಕೋಟಿಗಳ ಅನುದಾನ ಒದಗಿಸಲಾಗಿದೆ.

ಚುಳಕಿನಾಲಾ ಯೋಜನೆಯು ಪೂರ್ಣಗೋಂಡಿದ್ದು, ನಿರ್ವಹಣೆಯನ್ನು 2013–14 ನೇ ಸಾಲಿನಲ್ಲಿ ಕರ್ನಾಟಕ ನೀರಾವರಿ ನಿಗಮಕ್ಕೆ ಹಸ್ತಾಂತರಿಸಿದ್ದು, ಪ್ರಸಕ್ತ 2014–15ನೇ ಸಾಲಿನಲ್ಲಿ ಸದರಿ ಯೋಜನೆಯ ನಿರ್ವಹಣೆಗೆ ₹ 4.09 ಕೋಟಿಗಳ ಅನುದಾನ ಒದಗಿಸಲಾಗಿದೆ.

ಉ) ಸರ್ಕಾರವು ಈ ಯೋಜನೆಗಳ ಅನುಷ್ಠಾನ/ನಿರ್ವಹಣೆ ಚುರುಕುಗೊಳಿಸುವ ನಿಟ್ಟಿನಲ್ಲಿ 2013–14 ನೇ ಸಾಲಿನಲ್ಲಿ ಕರ್ನಾಟಕ ನೀರಾವರಿ ನಿಗಮಕ್ಕೆ ಹಸ್ತಾಂತರಿಸಿರುತ್ತದೆ.

ಕಾರಂಜಾ ಯೋಜನೆಯನ್ನು ಪ್ರಸಕ್ತ 2014–15ನೇ ಸಾಲಿನಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಚುಳುಕಿನಾಲಾ ಯೋಜನೆಯು ಪೂರ್ಣಗೊಂಡಿದ್ದು, ಕಾಲುವೆಗಳ ನಿರ್ವಹಣೆ/ದುರಸ್ತಿ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದೆ.

**ಬಾಲ ಕಾರ್ಮಿಕರಿಗೆ ಪುನರ್ವಸತಿ ಕಲ್ಪಿಸುವುದು**

**4119(4854); ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ**

ಅ) ಬೀದರ್ ಜಿಲ್ಲೆಯಲ್ಲಿ ಎಷ್ಟು ಜನ ಬಾಲ ಕಾರ್ಮಿಕರು ಪತ್ತೆಯಾಗಿದ್ದಾರೆ (ವಿವರ ನೀಡುವುದು)?

ಆ) ಪತ್ತೆಯಾದ ಬಾಲ ಕಾರ್ಮಿಕರ ಪುನರ್ವಸತಿಗಾಗಿ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ;

ಇ) ಈ ಜಿಲ್ಲೆಯಲ್ಲಿ ಇದುವರೆವಿಗೂ ಬಾಲ ಕಾರ್ಮಿಕ ನಿರ್ಮೂಲನೆ ಅಡಿಯಲ್ಲಿ ಎಷ್ಟು ದೂರುಗಳು ದಾಖಲಾಗಿದೆ (ವಿವರ ನೀಡುವುದು)?

**ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ (ಕಾರ್ಮಿಕ ರಾಜ್ಯ ಸಚಿವರು)**

ಅ) ಬೀದರ್ ಜಿಲ್ಲೆಯಲ್ಲಿ 2011–12ರ ಸಮೀಕ್ಷೆ ಮೂಲಕ 2560 ಬಾಲ ಕಾರ್ಮಿಕರನ್ನು ಪತ್ತೆ ಹಚ್ಚಲಾಗಿದೆ. ತಾಲ್ಲೂಕುವಾರು ವಿವರಗಳನ್ನು 'ಅನುಬಂಧ–ಅ' ನಲ್ಲಿ ಒದಗಿಸಿದೆ.